## ಕರ್ನಾಟಕ ಸರ್ಕಾರ

ಸಂ.ಎಂಯುಎನ್/ಸಿಬ್ಬಂದಿ/ಸಿಆರ್-03 /2009-10

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೀದರ
ದಿನಾಂಕ: -4-2010.
13-05-2010.

ಇವರಿಗೆ,

ಸಹಾಯಕ ನಿರ್ದೇಶಕರು,
ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳು,
ಬೀದರ.

ಮಾನ್ಯರೇ,

ವಿಷಯ:-ಕಂದಾಯ ಇಲಾಖೆಯಿಂದ 2005 ರ ನಂತರ ನಿವೃತ್ತಿ ಹೊಂದಿರುವ ಕಂದಾಯ ನಿರೀಕ್ಷಕರು, ಶಿರಸ್ತೇದಾರರು, ಹಾಗೂ ಅದಕ್ಕಿಂತ ಮೇಲ್ಪಟ್ಟವರಿಗೆ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ಅಹ್ವಾನಿಸಲಾದ ಪ್ರಕಟಣೆಯನ್ನು ಪತ್ರಿಕೆಗಳಲ್ಲಿ ಪ್ರಕಟಿಸುವ ಕುರಿತು.

★ ★ ★

2005 ರ ನಂತರ ಕಂದಾಯ ಇಲಾಖೆಯಿಂದ ನಿವೃತ್ತಿ ಹೊಂದಿರುವ ಕಂದಾಯ ನಿರೀಕ್ಷಕರು, ಶಿರಸ್ತೇದಾರರು, ಹಾಗೂ ಅದಕ್ಕಿಂದ ಮೇಲಿನ ಹುದ್ದೆಯವರಿಗೆ ಕಂದಾಯ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಮಾತ್ರ ಕಾರ್ಯನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಬೇಕಾಗಿದ್ದು ಪ್ರಕಟಿಸಬೇಕಾದ ವಿಷಯವನ್ನು ಇದರೊಂದಿಗೆ ಲಗತ್ತಿಸಿದೆ.

ಸದರಿ ಪ್ರಕಟಣೆಯನ್ನು ರಾಜ್ಯ ಮಟ್ಟದ ಕನ್ನಡ ದಿನ ಪತ್ರಿಕೆಗಳಲ್ಲಿ 3ಸಿಎಂ ★ 2 ಸಿಎಂ ಅಳತೆಯೊಳಗೆ ಸುದ್ದಿ ಕಂಡಿಕೆಯಲ್ಲಿ ಸಾರ್ವಜನಿಕ ಮಾಹಿತಿಗಾಗಿ ಉಚಿತವಾಗಿ ಪ್ರಕಟಿಸಲು ಕೋರಿದೆ.

ತಮ್ಮ ವಿಶ್ವಾಸಿ

ಜಿಲ್ಲಾಧಿಕಾರಿಗಳು
ಬೀದರ.

ಪ್ರತಿಯನ್ನು: ಜಿಲ್ಲಾ ಮಾಹಿತಿ (NIC) ಅಧಿಕಾರಿ ಬೀದರ ರವರಿಗೆ ರವಾನಿಸುತ್ತ ಸದರಿ ಪ್ರಕಟಣೆಯನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.

## ಕರ್ನಾಟಕ ಸರ್ಕಾರ

ಸಂ.ಎಂಯುಎಸ್/ಸಿಬ್ಬಂದಿ/ಸಿಆರ್-03/2009-10

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೀದರ
ದಿನಾಂಕ: -4-2010.
13-05-2010

-: ಪತ್ರಿಕಾ ಪ್ರಕಟಣೆ :-

2005 ರ ನಂತರ ಕಂದಾಯ ಇಲಾಖೆಯಿಂದ ನಿವೃತ್ತಿ ಹೊಂದಿರುವ ಕಂದಾಯ ನಿರೀಕ್ಷಕರು, ಶಿರಸ್ತೇದಾರರು, ಹಾಗೂ ಅದಕ್ಕಿಂತ ಮೇಲಿನ ಹುದ್ದೆಯವರಿಗೆ ಕಂದಾಯ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಮಾತ್ರ ಕಾರ್ಯನಿರ್ವಹಿಸಲು ಈ ಕೆಳಕಂಡ ಷರತ್ತುಗಳೊಂದಿಗೆ ಅರ್ಹ ನಿವೃತ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಷರತ್ತುಗಳು:

1. ಅರ್ಜಿದಾರರು ಕಂದಾಯ ಇಲಾಖೆಯಿಂದ ಕಂದಾಯ ನಿರೀಕ್ಷಕರು, ಶಿರಸ್ತೇದಾರ ಅಥವಾ ಅದಕ್ಕಿಂತಲೂ ಮೇಲಿನ ಹುದ್ದೆಯಿಂದ ನಿವೃತ್ತಿಹೊಂದಿರಬೇಕು.
2. ಅರ್ಜಿದಾರರು 2005 ರ ನಂತರ ನಿವೃತ್ತಿ ಹೊಂದಿದವರು ಮಾತ್ರ ಅರ್ಜಿ ಸಲ್ಲಿಸಲು ಯೋಗ್ಯರಾಗಿರುತ್ತಾರೆ.
3. ಮಾಸಿಕ ನಿಗದಿತ ವೇತನ ಸಂಧಾನದ ಆಧಾರದ ಮೇಲೆ ನೀಡಲಾಗುವುದು.
4. ಮಾಸಿಕ ವೇತನ ಬಿ.ಆರ್.ಜಿ.ಎಫ್. ಅನುದಾನದಿಂದ ನೀಡಲಾಗುವುದು.
5. ಗುತ್ತಿಗೆ ಆಧಾರದ ನೇಮಕಾತಿ ತಾತ್ಕಾಲಿಕವಾಗಿರುತ್ತದೆ.
6. ಗುತ್ತಿಗೆ ಆಧಾರದ ನೇಮಕಾತಿ ಕೇವಲ ಒಂದು ವರ್ಷದ ಅವಧಿಯಾಗಿದ್ದು ಪುನಃ ಅವಶ್ಯಕತೆಯಿದ್ದಲ್ಲಿ ಗುತ್ತಿಗೆ ಅವಧಿಯನ್ನು ಅಭ್ಯರ್ಥಿಗಳ ತೃಪ್ತಿಕರ ಸೇವೆಯನ್ನು ಆಧರಿಸಿ ಮತ್ತೊಂದು ಅವಧಿಗೆ ಮುಂದುವರಿಸಬಹುದಾಗಿರುತ್ತದೆ, ಆದರೆ ಯಾವುದೇ ಕಾರಣಕ್ಕು ಖಾಯಂಗೊಳಿಸಲಾಗುವುದಿಲ್ಲ.
7. ಅರ್ಜಿಯೊಂದಿಗೆ ಇತ್ತೀಚಿನ ಎರಡು ಪಾಸಪೋರ್ಟ ಅಳತೆಯ ಭಾವಚಿತ್ರಗಳನ್ನು ಅಂಟಿಸತಕ್ಕದ್ದು.
8. ಅಭ್ಯರ್ಥಿಯು ನಿಗದಿತ ಅರ್ಜಿಯ ನಮೂನೆಗಳನ್ನು ಜಿಲ್ಲಾಧಿಕಾರಿಗಳ ಕಛೇರಿಯ ಸ್ಪಂದನ ಶಾಖೆಯಲ್ಲಿ ಅಥವಾ ವೆಬ್‌ಸೈಟ್‌ನಲ್ಲಿ ಡೌನಲೋಡಮಾಡಿ ಪಡೆದು ಭರ್ತಿಮಾಡಿದ ಅರ್ಜಿಗಳನ್ನು ತಮ್ಮ ನಿವೃತ್ತಿ ವೇತನ ಪ್ರಮಾಣ ಪತ್ರದೊಂದಿಗೆ ದೃಢೀಕರಿಸಿ ಸಲ್ಲಿಸಬೇಕು.
9. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:22/05/2010 ರಂದು ಸಾಯಂಕಾಲ 5.30 ಗಂಟೆಯ ಒಳಗಾಗಿ ಜಿಲ್ಲಾಧಿಕಾರಿಗಳ ಕಛೇರಿ ಬೀದರ ಇವರಿಗೆ ಸಲ್ಲಿಸತಕ್ಕದ್ದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಸದರಿ ಪ್ರಕಟಣೆಯನ್ನು ವೆಬ್ ಸೈಟ್: www.bidar.nic.in ನಲ್ಲಿ ನೋಡಬಹುದು.

ಜಿಲ್ಲಾಧಿಕಾರಿಗಳು
ಬೀದರ.

## ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ ಜಿಲ್ಲೆ ಬೀದರ.

(ಕಂದಾಯ ಇಲಾಖೆಯಿಂದ ನಿವೃತ್ತಿ ಹೊಂದಿರುವ ಕಂ.ನಿ. ಶಿರಸ್ತೇದಾರರು. ಹಾಗೂ ಅದಕ್ಕಿಂತ ಮೇಲ್ಪಟ್ಟ ಹುದ್ದೆಗೆ ಅರ್ಜಿ)

ಎಂಎಯುಎನ್/ಸಿಬ್ಬಂದಿ/ಸಿಆರ್-03/2010-11 ದಿನಾಂಕ:13.05.2010 ಕ್ಕೆ ಅನುಸಾರವಾಗಿ ಕಂದಾಯ ಇಲಾಖೆಯಿಂದ ನಿವೃತ್ತಿ ಹೊಂದಿರುವ ಕಂ.ನಿ/ ಶಿರಸ್ತೇದಾರರು/ಹಾಗೂ ಅದಕ್ಕಿಂತ ಮೇಲ್ಪಟ್ಟ ಹುದ್ದೆಯವರಿಗೆ ಗುತ್ತಿಗೆ ಅಧಾರದ ಮೇಲೆ ಒಂದು ವರ್ಷದ ಅವಧಿಗೆ ಮಾತ್ರ ಕಾರ್ಯ ನಿರ್ವಹಿಸಲು ನನ್ನ ಅರ್ಜಿಯನ್ನು ಈ ಕೆಳಗೆ ಕೇಳಿರುವ ಮಾಹಿತಿಯೊಂದಿಗೆ ಸಲ್ಲಿಸುತ್ತಿದ್ದೇನೆ.

1. ಅಕ್ಷರದಲ್ಲಿಯೇ ಉತ್ತರಿಸಬೇಕು
2. ಕೊಟ್ಟಿರುವ ಮಾಹಿತಿ ಅಪೂರ್ಣವಾಗಿದ್ದಲ್ಲಿ ಅಜಿಯು ತಿರಸ್ಕರಿಸಲಾಗುವುದು.

| | | |
|---|---|---|
| 1 | ಅಭ್ಯರ್ಥಿಯ ಹೆಸರು<br>1. ಅಭ್ಯರ್ಥಿಯ ಹೆಸರು<br>2. ಅಂಚೆ ವಿಳಾಸ<br>3. ಸಂಪರ್ಕಿಸಲು ದೂರವಾಣಿ ಸಂಖ್ಯೆ: | |
| 2 | 1. ಹುಟ್ಟಿದ ದಿನಾಂಕ<br>2. ಊರು,ಪಟ್ಟಣ,ತಾಲೂಕು.<br>3. ಜಿಲ್ಲೆ. | |
| 3 | ಪುರುಷರೇ/ಸ್ತ್ರೀಯರೇ? | |
| 4 | 1. ಅನುಸೂಚಿತ ಜಾತಿಗೆ ಸೇರಿದವರೇ?<br>2. ಅನುಸೂಚಿತ ಪಂಗಡಕ್ಕೆ ಸೇರಿದವರೇ?<br>(ದಾಖಲೆ ಪತ್ರ ಲಗತ್ತಿಸಿ) | |
| 5 | ನಿವೃತ್ತಿ ಹೊಂದಿರುವ ದಾಖಲಾತಿ ಪ್ರಮಾಣ ಪತ್ರಗಳು,<br>(ಪತ್ರಾಂಕಿತ ಅಧಿಕಾರಿಗಳಿಂದ ಧೃಢೀಕರಿಸಿ ಕಳುಹಿಸುವುದು). | |

ಮೇಲೆ ಒದಗಿಸಲಾದ ಮಾಹಿತಿಯು ನಿಜವೆಂದು ಮತ್ತು ಸಂಪೂರ್ಣ ಸತ್ಯವೆಂದು ಪ್ರಮಾಣಿಕರಿಸುತ್ತೇನೆ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ವಿಧಿಸುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧನಾಗಿರುವುದಾಗಿಯೂ ಸಹ ಪ್ರಮಾಣಿಕರಿಸುತ್ತೇನೆ.

ಸ್ಥಳ:

ದಿನಾಂಕ: ಅಭ್ಯರ್ಥಿಯ ಸಹಿ

ಸೂಚನೆ:ಈ ಕೆಳಕಂಡ ದಾಖಲಾತಿಗಳನ್ನು ಅರ್ಜಿಯೊಂದಿಗೆ ಧೃಢೀಕರಣದೊಂದಿಗೆ ಸಲ್ಲಿಸುವುದು ತಪ್ಪಿದಲ್ಲಿ ನಿಮ್ಮ ಅಜಿಯನ್ನು ತಿರಸ್ಕರಿಸಲಾಗುವುದು.

1. ನಿವೃತ್ತಿ ಹೊಂದಿರುವ ದಾಖಲಾತಿ ಪ್ರಮಾಣ ಪತ್ರಗಳು.
2. ಇತ್ತೀಚಿನ ಎರಡು ಭಾವ ಚಿತ್ರಗಳು.